ದಿ: 19-06-2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಶ್ರೀ ಎಂ.ಎಸ್.ಎಸ್. ವಕೀಲರಿಂದ :-

1. ದಾವೆಯ 66 ಐಟಂ ಸ್ವತ್ತುಗಳ ಪೈಕಿ ಕೆಲವು ಸ್ವತ್ತುಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ಬೋಗಪ್ಪನ ಹಿರಿಯ ಮಗ ತಿಮ್ಮಪ್ಪನಿಗೂ ದಾವಾ ಸ್ವತ್ತುಗಳಿಗೂ ಯಾವುದೇ ಸಂಬಂಧ ಇಲ್ಲ ಅಂದರೆ ಸಾಕ್ಷಿಯು ಒಂದು ಸ್ವತ್ತಿಗೆ ಸಂಬಂಧ ಇರುತ್ತದೆ ಅಂತ ನುಡಿಯುತ್ತಾರೆ. ಅದು ಮಳಲಿ ಗ್ರಾಮದ ರಿ.ಸ.ನಂ.253 ರಲ್ಲಿ ಸುಮಾರು 1 ಎಕರೆ ಇರುತ್ತದೆ. ಸದರಿ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿರುತ್ತದೆ. ಸದರಿ ಸ್ವತ್ತು ಬೋಗಪ್ಪನಿಗೆ ವಾದಿಯರ ತಂದೆಗೆ ದರಖಾಸ್ತು ಮೂಲಕ ಮಂಜೂರಾಗಿತ್ತದೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ವಾದಿಯರ ತಂದೆ ಬಗರ್ ಹುಕುಂ ಆಗಿ ಸಾಗುವಳಿ ಮಾಡಿದ್ದರು ಅಂದರೆ ಸರಿಯಲ್ಲ. ಸದರಿ ಸ್ವತ್ತು ಈ ದಾವೆಯ 66 ನೇ ಐಟಂ ಆಗಿರುತ್ತದೆ ಅಂದರೆ ಸರಿಯಲ್ಲ. ನಮ್ಮ ದೊಡ್ಡಪ್ಪ ತಿಮ್ಮಪ್ಪನಿಗೆ ಸೇರಿರುವ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಸದರಿ ತಿಮ್ಮಪ್ಪನಿಗೆ 03 ಜನ ಮಕ್ಕಳಿದ್ದು, ಅವರೆಂದರೆ ತಿಪ್ಪೇಶಪ್ಪ, ಬೀರಪ್ಪ ಮತ್ತು ವೆಂಕಟೇಶಪ್ಪ. ಸದರಿ ತಿಮ್ಮಪ್ಪ ತೀರಿಕೊಂಡ ನಂತರ ಆತನ 3 ಜನ ಮಕ್ಕಳು ಅವರ ಸ್ವತ್ತುಗಳನ್ನು ಅನುಭವಿಸುತ್ತಿದ್ದಾರೆ ಅಂದರೆ ಸರಿ.

2. ನನ್ನ ದೊಡ್ಡಪ್ಪ ತಿಮ್ಮಪ್ಪ ತನ್ನ 03 ಜನ ಸಹೋದರರು ಅಂದರೆ ತನ್ನ ತಂದೆಯ 2 ನೇ ಹೆಂಡತಿಯ ಮಕ್ಕಳಿಂದ ಬಹಳ ವರ್ಷಗಳ ಹಿಂದೆ ಭಾಗ ಆಗಿ ಬೇರ್ಪಟ್ಟಿದ್ದರು ಅಂದರೆ ಸರಿಯಲ್ಲ. 1953 ರಲ್ಲಿ ಸದರಿ ತಿಮ್ಮಪ್ಪ ಮತ್ತು ಅವರ ಸಹೋದರರು ಭಾಗ ಆಗಿ ಬೇರೆ ಆಗಿರುತ್ತಾರೆ. ರಿ.ಸ.ನಂ.53 ರಲ್ಲಿ ತಿಮ್ಮಪ್ಪನವರು ಬೇರೆ ಆಗಿರುವುದಕ್ಕೆ ನಿಡಿ-56 ರಲ್ಲಿ ವಕ್ಕಣೆ ಇರುತ್ತದೆ. ತಿಮ್ಮಪ್ಪನವರ ಮಕ್ಕಳು ತಮ್ಮ ಹೆಸರಿಗೆ ಖಾತೆ ಮಾಡಿಕೊಂಡಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ಬೋಗಪ್ಪ, 1 ಮತ್ತು 2 ನೇ ವಾದಿಯರ ಸ್ವತ್ತಿಗೆ ಸಂಬಂಧಿಸಿದಂತೆ ಸಲ್ಲಿಸಲಾಗಿದೆ ಅಂದರೆ ಸಾಕ್ಷಿಯು ಪ್ರತಿವಾದಿ 1 ಮತ್ತು 2 ರವರ ಸ್ವತ್ತಿಗೆ ಮಾತ್ರ ಸಂಬಂಧಿಸಿದಂತೆ ಸಲ್ಲಿಸಲಾಗಿದೆ ಅಂತ ನುಡಿಯುತ್ತಾರೆ.

3. ಐಟಂ ನಂ.26 ಯಾರ ಹೆಸರಿನಲ್ಲಿದೆ ಅಂದರೆ ಸಾಕ್ಷಿಯು ಸದರಿ ಜಮೀನಿನ ವಿವರಣೆ ಮೂಲಕ ಆ ಜಮೀನನ್ನು ಗುರುತಿಸಲು ಆಗುತ್ತಿಲ್ಲ ಅಂತ ನುಡಿಯುತ್ತಾರೆ. ಐಟಂ ನಂ.44 ಮತ್ತು 45 ರ ಸ್ವತ್ತುಗಳನ್ನು ಬೋಗಪ್ಪ ನವರು 12-06-1961 ರಲ್ಲಿ ಮತ್ತು 08-06-1968 ರಲ್ಲಿ ಕ್ರಮವಾಗಿ ಕ್ರಯಕ್ಕೆ ಪಡೆದಿರುತ್ತಾರೆ ಅಂದರೆ ಇರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ ಐಟಂ ನಂ.44 ಅಣೇಗೆರೆ ರಂಗಪ್ಪನವರ ಸ್ವಾಧೀನದಲ್ಲಿದ್ದು, ಪ್ರತಿವಾದಿ 1 ಮತ್ತು 2 ರವರ ಹೆಸರಿನಲ್ಲಿ ಇರುತ್ತದೆ. ಯಾವ ಸಾಲಿನಲ್ಲಿ ಅವರ ಹೆಸರಿಗೆ ಖಾತೆ ಆಯಿತು ಎಂದು ನನಗೆ ಗೊತ್ತಿಲ್ಲ. ನಮ್ಮ

ಮನೆಗೆ ಬಂದು ಸೇರಿಕೊಳ್ಳುವ ಪೂರ್ವದಲ್ಲಿ ಬೋಗಪ್ಪನವರು ಯಾರ ಮನೆಯಲ್ಲಿ ವಾಸವಾಗಿದ್ದರು ಅಂತ ನನಗೆ ಗೊತ್ತಿಲ್ಲ. ನಮ್ಮ ಮನೆಗೆ ಬರುವ ಪೂರ್ವದಲ್ಲಿ ಎಲ್ಲಿ ವಾಸವಾಗಿದ್ದರು ಎನ್ನುವ ವಿಚಾರವನ್ನು ತಿಳಿದುಕೊಂಡಿರುವುದಿಲ್ಲ.

4. ಬೋಗಪ್ಪನವರಿಗೆ ಕೆ.ಕೆ.ಹಟ್ಟಿಯಲ್ಲಿ ಒಂದು ಹಳೆ ಮನೆ ಇತ್ತು, ಅದನ್ನು ದ್ಬಿಬದ ಬೋಗಣ್ಣ ಎನ್ನುವವರಿಗೆ ಮಾರಾಟ ಮಾಡಿದ್ದರು ಎನ್ನುವುದನ್ನು ನಾನು ಕೇಳಿದ್ದೆನು. ಆ ಬಗ್ಗೆ ದಾಖಲೆಯನ್ನು ನಾನು ನೋಡಿರುವುದಿಲ್ಲ. ಯಾವ ಸಾಲಿನಲ್ಲಿ ಸದರಿ ಮನೆಯನ್ನು ಮಾರಾಟ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಹನುಮಂತಪ್ಪ ಮತ್ತು ಸಣ್ಣ ತಿಮ್ಮಪ್ಪನವರು ಯಾವ ಯಾವ ಸ್ವತ್ತುಗಳನ್ನು ಕ್ರಯಕ್ಕೆ ಪಡೆದಿರುತ್ತಾರೆ ಎನ್ನುವ ವಿಚಾರವು ಪ್ರತಿವಾದ ಪತ್ರದಲ್ಲಿ ಹೇಳಿರುತ್ತೇನೆ. 2 ನೆ ಪ್ರತಿವಾದಿಯು ಕ್ರಯಕ್ಕೆ ಪಡೆದಿದ್ದಾರೆ ಎಂದು ಹೇಳಲಾದ ಸ್ವತ್ತುಗಳ ಬಗ್ಗೆ ಕ್ರಯಪತ್ರಗಳು ಲಭ್ಯವಿರುತ್ತವೆ ಆ ಸ್ವತ್ತುಗಳ ಬಗ್ಗೆ ನಾನು ಕ್ರಯಪತ್ರಗಳನ್ನು ಹಾಜರುಪಡಿಸಿರುವುದಿಲ್ಲ ಸದರಿ ಕ್ರಯಪತ್ರಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಐಟಂ ನಂ.13, 28, 31, 32, 54, 56 ರಿಂದ 59ರ ಸ್ವತ್ತುಗಳನ್ನು ನಮ್ಮ ತಂದೆ ಕ್ರಯಕ್ಕೆ ಪಡೆದಿದ್ದಾರೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ಸ್ವತ್ತುಗಳನ್ನು ನಮ್ಮ ತಂದೆ ಯಾವ ಯಾವ ಸ್ವತ್ತುಗಳನ್ನು ಯಾರು ಯಾರಿಂದ ಯಾವ ವರ್ಷಗಳಲ್ಲಿ ಕ್ರಯಕ್ಕೆ ಪಡೆದಿರುತ್ತಾರೆ ಎಂದು ಹೇಳಲು ಆಗುವುದಿಲ್ಲ.

5. ಐಟಂ ನಂ.1, 2, 4, 9 ರಿಂದ 12, 18, 20, 23, 41, 42 ಮತ್ತು 44, 45, 48 ರಿಂದ 53 ಸ್ವತ್ತುಗಳು ಬೋಗಪ್ಪನವರಿಗೆ ಯಾವ ರೀತಿ ಬಂದಿರುತ್ತವೆ ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ಸ್ವತ್ತುಗಳ ದಾಖಲೆಗಳನ್ನು ನಾನು ನೋಡಿರುವುದಿಲ್ಲ. 1953ರ ಸಾಲಿನಲ್ಲಿ ಭಾಗ ಮಾಡಿಕೊಂಡಿದ್ದರು ಎಂದು ಹೇಳಲಾದ ಸಮಯದಲ್ಲಿ ಮನೆಯ ಯಜಮಾನಿಕೆಯನ್ನು ಯಾರು ಮಾಡುತ್ತಿದ್ದರು ಅಂತ ನನಗೆ ಗೊತ್ತಿಲ್ಲ. ಬೋಗಪ್ಪ, ಪ್ರತಿವಾದಿ 1 ಮತ್ತು 2ರವರು ಹೆಣ್ಣುಮಕ್ಕಳಲ್ಲಿ ಹೊಂದಾಣಿಕೆ ಬಾರದ ಕಾರಣ ಪ್ರತ್ಯೇಕವಾಗಿ ವಾಸವಾಗಿದ್ದರು ಅಂದರೆ ನನಗೆ ಗೊತ್ತಿಲ್ಲ. ಒಟ್ಟು ಕುಟುಂಬದ ಆದಾಯದಿಂದ ಕೆಲವು ಸ್ವತ್ತುಗಳನ್ನು ಬೋಗಪ್ಪನ ಹೆಸರಿನಲ್ಲೂ, ಕೆಲವು ಸ್ವತ್ತುಗಳನ್ನು ನನ್ನ ತಂದೆಯ ಹೆಸರಿನಲ್ಲಿ ಮತ್ತು ಕೆಲವು ಸ್ವತ್ತುಗಳನ್ನು ಸಣ್ಣ ತಿಮ್ಮಪ್ಪನ ಹೆಸರಿನಲ್ಲಿ ಖರೀದಿಸಲಾಗಿತ್ತು ಅಂದರೆ ಸರಿಯಲ್ಲ. ಮೇಲೆ ಹೇಳಿದ ಐಟಂ ಸ್ವತ್ತುಗಳು 1 ಮತ್ತು 2ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳಾಗಿರುವುದಿಲ್ಲ ಅಂದರೆ ಸರಿಯಲ್ಲ. ಇದುವರೆವಿಗೂ ಬೋಗಪ್ಪ, 1 ಮತ್ತು 2ನೇ ಪ್ರತಿವಾದಿಗಳು ಕುಟುಂಬದ ಆಸ್ತಿಗಳಲ್ಲಿ ಭಾಗ ಮಾಡಿ ಕೊಂಡಿರುವುದಿಲ್ಲ ಅಂದರೆ ಸರಿಯಲ್ಲ. ವಾದಿಯರು ಭಾಗ ಕೋರಿ ಈ ದಾವೆ ಹೂಡಿರುತ್ತಾರೆ. ವಾದಿಯರಿಗೆ ತಮ್ಮ ತಂದೆಯ 1/3 ನೇ ಭಾಗ ಬರಬೇಕಾಗಿರುತ್ತದೆ ಅಂದರೆ ಸರಿಯಲ್ಲ.

6. ದಾವಾ ಸ್ವತ್ತುಗಳ ಪೈಕಿ ಕೆಲವು ಸ್ವತ್ತುಗಳನ್ನು ನನ್ನ ಹೆಸರಿನಲ್ಲಿ ಖರೀದಿಸಲಾಗಿದೆ ಎಂದರೆ ಸಾಕ್ಷಿಯು ನಾನೇ ಸ್ವಯಾರ್ಜಿತವಾಗಿ ಖರೀದಿಸಿರುತ್ತೇನೆ ಅಂತ ನುಡಿಡಯುತ್ತಾರೆ. ಬೋಗಪ್ಪ, 1 ಮತ್ತು 2 ನೇ ಪ್ರತಿವಾದಿಯರ ಒಟ್ಟು ಕುಟುಂಬದ ಇತರೆ ಆಸ್ತಿಗಳಿಂದ ಬಂದ ಆದಾಯದಿಂದ ನಾನು ಆ ಸ್ವತ್ತುಗಳನ್ನು ಕ್ರಯಕ್ಕೆ ಪಡೆದಿರುತ್ತೇನೆ ಅಂದರೆ ಸರಿಯಲ್ಲ. ಐಟಂ ನಂ.60 ರ ನಿವೇಶನವನ್ನು ವಾದಿಯರ ತಂದೆ ಬೋಗಪ್ಪ ಮತ್ತು ಪ್ರತಿವಾದಿ 2(ಎ)ರವರ ಮಾವ ನಾಗಪ್ಪನವರು ಜಂಟಿಯಾಗಿ ಖರೀದಿಸಿದ್ದರು ಅಂದರೆ ನನಗೆ ಗೊತ್ತಿಲ್ಲ. ಸದರಿ ನಿವೇಶನದಲ್ಲಿ ಮನೆಯನ್ನು ಕಟ್ಟಿಸಿದ ನಂತರ ಬೋಗಪ್ಪ ಮತ್ತು ನಾಗಪ್ಪ ತಲಾ ಅರ್ಧ ಭಾಗದಂತೆ ಹಂಚಿಕೊಂಡರು ಅಂದರೆ ನನಗೆ ಗೊತ್ತಿಲ್ಲ ಎಂದು ನುಡಿದು ಸ್ವಲ್ಪ ಸಮಯದ ನಂತರ ಸುಳ್ಳು ಎಂದು ನುಡಿಯುತ್ತಾರೆ. ಬೋಗಪ್ಪನ ಭಾಗಕ್ಕೆ ಬಂದ ಅರ್ಧ ಹಿಸ್ಸೆ ಈ ದಾವೆಯ ಐಟಂ ನಂ.60 ರ ಸ್ವತ್ತು ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ.

7. ನಿಡಿ-1 ರ ವಿಲ್ಲಿಗೆ ಬೋಗಪ್ಪ ಹೆಬ್ಬೆಟ್ಟಿನ ಗುರುತನ್ನು ಹಾಕಿರುವುದಿಲ್ಲ ಅಂದರೆ ಸರಿಯಲ್ಲ. ವಾದಿಯರು ನಿಡಿ-1 ಕ್ಕೆ ಸಹಿ ಹಾಕಿರುವುದಿಲ್ಲ ಅಂದರೆ ಸರಿಯಲ್ಲ. ವಾದಿಯರಿಗೆ ಭೋಗಪ್ಪನ ಸ್ವತ್ತುಗಳು ಹೋಗುವುದನ್ನು ತಪ್ಪಿಸುವ ಸಲುವಾಗಿ ನಿಡಿ-1 ನ್ನು ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ. ಐಟಂ ನಂ.56 ರಸ್ವತ್ತು ನಮ್ಮ ತಂದೆಗೆ ಮಂಜೂರಾಗಿತ್ತು, ಐಟಂ ನಂ.64 ಮತ್ತು 65 ರ ಸ್ವತ್ತುಗಳನ್ನು ನಮ್ಮ ತಂದೆ ಖರೀದಿಸಿದ್ದರು. ಖರೀದಿಸಿದ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಬೋಗಪ್ಪ ಪ್ರತಿವಾದಿ 1 ಮತ್ತು 2 ರವರ ನಡುವೆ ಯಾವುದೇ ವಿಭಾಗ ಆಗದೇ ಇದ್ದರೂ ಸಹ ವಾದಿಯರ ಭಾಗಾಂಶವನ್ನು ವಂಚಿಸುವ ಸಲುವಾಗಿ ನಿಡಿ-1 ಮತ್ತು ನಿಡಿ-56 ರ ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ. ಈಗ ನಾನು ಸಾಕ್ಷ್ಯದಲ್ಲಿ ಹೇಳಿರುವ ಕೆಲವು ವಿಚಾರಗಳು 2 ನೇ ಪ್ರತಿವಾದಿಯ ಮಕ್ಕಳಿಗೆ ತಿಳಿದಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾನು ಹೇಳಿ ಬರೆಸಿಲ್ಲ ಅಂದರೆ ಸರಿಯಲ್ಲ ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ